# ಉದ್ಧಟತನದ ವರ್ತನೆ

**ಕರ್ನಾಟಕ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿ ಒಕ್ಕೂಟ ತಮ್ಮ ಶಾಲೆಗಳಲ್ಲಿ ಸರ್ಕಾರದ ಆದೇಶಕ್ಕಾಗಲೀ, ಸುಪ್ರೀಂಕೋರ್ಟಿನ ತೀರ್ಪಿಗಾಗಲೀ ಕವಡೆಕಾಸಿನ ಕಿಮ್ಮತ್ತು ನೀಡಿಲ್ಲ. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಅಂದರೆ ಯಾವುವು ಎಂಬುದನ್ನು ಸರಿಯಾಗಿ ವ್ಯಾಖ್ಯಾನ ಮಾಡಿ ಎಂದು ಕುಂಟುನೆಪ ತೆಗೆದು ಆದೇಶ ಜಾರಿಗೊಳಿಸಲು ಹಿಂದೇಟು ಹಾಕುತ್ತಿವೆ. ಜುಲೈ 16ರಿಂದ 22ರವರೆಗೆ ಶಾಲೆಗಳನ್ನು ಮುಚ್ಚುವ ಬೆದರಿಕೆಯನ್ನೂ ಹಾಕಿದೆ.**




'ವಿದ್ಯಾ ದಾನವೆ ಎಲ್ಲ ದಾನಕ್ಕಿಂತ ಶ್ರೇಷ್ಠ ದಾನ' ಎಂಬುದು ಭಾರತೀಯರಿಗೆ ಪ್ರಾಚೀನ ಕಾಲದಿಂದ ಬಂದ ನಂಬಿಕೆ. ಸಮಾಜದ ಅಭಿವೃದ್ಧಿಗೆ ವಿದ್ಯೆಯೇ ಅಡಿಪಾಯ. ಆದರ್ಶದ ಮೌಲ್ಯಗಳನ್ನು ಸಮಾಜ ರೂಢಿಸಿಕೊಳ್ಳುವುದು ವಿದ್ಯೆಯಿಂದಲೇ. ವಿದ್ಯೆ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಆರೋಗ್ಯ, ನೀರು, ವಸತಿ, ಉದ್ಯೋಗಕ್ಕೆ ನೀಡುವ ಆದ್ಯತೆಯನ್ನು ಸರ್ಕಾರ ಶಿಕ್ಷಣಕ್ಕೂ ನೀಡಬೇಕಾಗುತ್ತದೆ. ಈ ಮೂಲಭೂತ ಹಕ್ಕನ್ನು ಒದಗಿಸುವ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದು. ಸರ್ಕಾರದ ಜೊತೆ ಕೈಜೋಡಿಸಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಏಜೆನ್ಸಿಗಳಂತೆ ಕೆಲಸ ಮಾಡುತ್ತವೆ. ಹಾಗಾಗಿ ಸರ್ಕಾರದ ಶಿಕ್ಷಣ ನೀತಿಯನ್ನು ಪಾಲಿಸಬೇಕಾದುದು ಅವುಗಳ ಧರ್ಮ. ವಿಪರ್ಯಾಸವೆಂದರೆ, ಯಾವುದು ಸಮಾಜದ ಉನ್ನತ ಆದರ್ಶವಾಗಬೇಕಿತ್ತೋ ಅದೇ ವಿದ್ಯೆ ಅಕ್ರಮ ಮಾರ್ಗಗಳಿಂದ ಹಣ ಗಳಿಸುವ ದಂಧೆಯಾಗಿದೆ! ಆದ್ದರಿಂದಲೇ ಸುಪ್ರೀಂಕೋರ್ಟಿನ ತೀರ್ಪನ್ನೂ ಪಾಲಿಸದ ಉದ್ಧಟತನಕ್ಕೆ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಇಳಿದಿವೆ.

ಸರ್ವರಿಗೂ ಶಿಕ್ಷಣ ದೊರೆಯಬೇಕು ಎಂಬ ಸದುದ್ದೇಶದಿಂದ ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ/ ನಿಯಂತ್ರಣ ಮತ್ತು ಪಠ್ಯ ವಸ್ತುವಿನ ನಿಗದಿ) 1995ರ ನಿಯಮ ಅನ್ವಯ ರಾಜ್ಯ ಸರ್ಕಾರ ಕಳೆದ ವರ್ಷ ಅಂದರೆ 2011ರ ಡಿಸೆಂಬರ್ 8ರಂದು ಒಂದು ಸುತ್ತೋಲೆ ಹೊರಡಿಸಿ– ಪ್ರತಿಯೊಂದು ಶಾಲೆಯಲ್ಲೂ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶೇ.25ರಷ್ಟು ಸೀಟನ್ನು ಕಡ್ಡಾಯವಾಗಿ ನೀಡಬೇಕು ಎಂದು ಸೂಚಿಸಿತು. ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಹೊರಡಿಸಿ 20 ಮೇ 2012ರ ಒಳಗಾಗಿ ಪ್ರವೇಶವನ್ನು ಭರ್ತಿ ಮಾಡಿಕೊಳ್ಳಬೇಕು. ಮಕ್ಕಳಿಗೆ ಪ್ರವೇಶ ನೀಡುವ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಬೇಕು ಎಂದೂ ಸೂಚಿಸಿತು. ಖಾಸಗಿ ಶಿಕ್ಷಣ ಸಂಸ್ಥೆಗಳು ಶೇ.25ರಷ್ಟು ಸೀಟುಗಳನ್ನು ಬಡವರು ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ನೀಡಬೇಕು ಎಂದು ಸೂಚಿಸಿರುವುದು ಒಂದು ಕ್ರಾಂತಿಕಾರಕ ಕ್ರಮವಾಗಿದ್ದು, ಇದೇ ವರ್ಷದಿಂದ ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಸುಪ್ರೀಂಕೋರ್ಟ್ ಏಪ್ರಿಲ್ 12ರಂದು ತೀರ್ಪು ನೀಡಿತು.

ಸರ್ಕಾರದ ಆದೇಶ ಹಾಗೂ ಸುಪ್ರೀಂಕೋರ್ಟಿನ ತೀರ್ಪಿನ ಅನ್ವಯ ಹಲವು ಖಾಸಗಿ ಸಂಸ್ಥೆಗಳು ಬಡಮಕ್ಕಳಿಗೆ ಪ್ರವೇಶ ನೀಡುವ ಪ್ರಕ್ರಿಯೆ ಆರಂಭಿಸಿದವು. ಕಾನೂನು ಜಾರಿಯಾದ ಈ ಮೊದಲ ವರ್ಷ ರಾಜ್ಯದಲ್ಲಿ ಶೇ.37ರಷ್ಟು ಪ್ರಗತಿ ಸಾಧಿಸಲಾಯಿತು. ಸರ್ಕಾರದ ಅಂದಾಜಿನಂತೆ 1,12,474 ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕಿದ್ದು, ಇದರಲ್ಲಿ 41,663 ಮಕ್ಕಳು ಮಾತ್ರ ಪ್ರಸಕ್ತವರ್ಷ ಪ್ರವೇಶ ಪಡೆದರು. ಹೆಚ್ಚು ಖಾಸಗಿ ಶಾಲೆಗಳನ್ನು ಹೊಂದಿರುವ ಬೆಂಗಳೂರಿನಲ್ಲಿ ಪ್ರವೇಶ ಪಡೆದವರು ರಾಜ್ಯದ ಸರಾಸರಿಗಿಂತ ಕಡಿಮೆ. ಸಿಬಿಎಸ್ಇ ಮತ್ತು ಐಸಿಎಸ್ಇ ಶಾಲೆಗಳ ಪೈಕಿ ಸಿಬಿಎಸ್ಇ ಶಾಲೆಗಳಲ್ಲಿ ಮಾತ್ರ ಬೆರಳೆಣಿಕೆಯ ಪ್ರವೇಶ ನೀಡಲಾಗಿದೆ. ಸರ್ಕಾರದ ನಿಯಮಾವಳಿ ಪ್ರಕಟವಾಗುವ ಹೊತ್ತಿಗೆ ಪ್ರವೇಶ ಪ್ರಕ್ರಿಯೆ ಮುಗಿದುಹೋಗಿತ್ತು. ಮುಂದಿನ ವರ್ಷದಿಂದ ಬಡಮಕ್ಕಳಿಗೆ ಪ್ರವೇಶ ನೀಡಲಾಗುವುದು ಎಂದು ಹಲವು ಶಾಲೆಗಳ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಬರೆದುಕೊಟ್ಟಿದ್ದಾರೆ. ಪೋಷಕರಲ್ಲಿ ಈ ಕುರಿತ ಅರಿವಿನ ಕೊರತೆಯಿಂದ ಈ ವರ್ಷ ಶೇ.37ರ ಗುರಿ ಸಾಧಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಸಾಧನೆಯ ಪ್ರಮಾಣ ಹೆಚ್ಚಲಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಮಜಾಯಿಷಿ ನೀಡುತ್ತಾರೆ.

ಇದೇನೋ ತಕ್ಕಮಟ್ಟಿನ ಸಾಧನೆ. ಆದರೆ ಕರ್ನಾಟಕ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿ ಒಕ್ಕೂಟ (ಕುಸುಮ) ವ್ಯಾಪ್ತಿಯ ಶಾಲೆಗಳು ಮಾತ್ರ ಸರ್ಕಾರದ ಆದೇಶಕ್ಕಾಗಲೀ, ಸುಪ್ರೀಂಕೋರ್ಟಿನ ತೀರ್ಪಿಗಾಗಲೀ ಕವಡೆಕಾಸಿನ ಕಿಮ್ಮತ್ತು ನೀಡಿಲ್ಲ. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಅಂದರೆ ಯಾವುವು ಎಂಬುದನ್ನು ಸರಿಯಾಗಿ ವ್ಯಾಖ್ಯಾನ ಮಾಡಿ ಎಂದು ಕುಂಟುನೆಪ ತೆಗೆದು ಆದೇಶ ಜಾರಿಗೊಳಿಸಲು ಹಿಂದೇಟು ಹಾಕುತ್ತಿವೆ. ಜುಲೈ 16ರಿಂದ 22ರ ವರೆಗೆ ಶಾಲೆಗಳನ್ನು ಮುಚ್ಚುವ ಬೆದರಿಕೆಯನ್ನು ಹಾಕಿ ಹದ್ದುಮೀರಿ ವರ್ತಿಸುತ್ತಿವೆ. ಶೇ.25ರಷ್ಟು ಬಡಮಕ್ಕಳಿಗೆ ಪ್ರವೇಶ ನೀಡುವುದರಿಂದ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಹೊರೆಯೇನೂ ಆಗದು. ಶೈಕ್ಷಣಿಕ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಸರ್ಕಾರದಿಂದ ಹಲವು ರೀತಿಯ ಸಹಾಯ, ರಿಯಾಯಿತಿಯನ್ನು ಶಿಕ್ಷಣ ಸಂಸ್ಥೆಗಳು ಪಡೆಯುತ್ತಿವೆ. ಆದರೂ ದುಂಡಾವರ್ತನೆ ಪ್ರದರ್ಶಿಸುತ್ತಿವೆ. ಸರ್ಕಾರ ದುರ್ಬಲವಾದಷ್ಟು ಅವುಗಳ ದುರುಳತನ ಹೆಚ್ಚುತ್ತದೆ. ಬಡಮಕ್ಕಳಿಗೆ ಶಿಕ್ಷಣ ನೀಡುವ ದಾರಿಯಲ್ಲಿ ಎದುರಾಗುವ ಅಡ್ಡಿಗಳಿಂದ ಸರ್ಕಾರ ಹಿಂದೆ ಸರಿದರೆ ಅಂತಹ ಸರ್ಕಾರ ಇದ್ದೂ ಇಲ್ಲದಂತೆ.

■ **ಗುಡಿಹಳ್ಳಿ ನಾಗರಾಜ**